ಆಡಿಕೊಂಡು ನಗುತ್ತಿದ್ದೆವು. ಸುತ್ತಲ ಸೀಮೆಯಲಿ ಯಾವ ಜಾತಿಯವರ ಯಾವ ಕೇರಿಯವರ ಮನೆಯಲ್ಲಿ ಮದುವೆ ದಿಬ್ಬಣ ಏಳುವುದಕ್ಕೂ ಸಾಬರ ಗರ್ನಾಲು ಬೇಕಾದ್ದರಿಂದ, ಮನೆಗೆ ನೆಂಟರು ಬಂದ ಆರ್ಡರ ತಗೊಂಡ ಬೆಸ್ತರಿಗೆ ನಾಳೆ ಅಷ್ಟೂ ಮೀನು ಪೂರೈಸಲು ಸಾಬರ ಸಣ್ಣ ಗರ್ನಾಲು 'ಮೀನ ಮದ್ದುಂಡೆ'ಯಾಗಿ ಸಹಾಯ ಮಾಡುತ್ತಿತ್ತಾದ್ದರಿಂದ ಸಾಬರಿಗೆ ದಿನದ ಬದುಕಿನ ಲೆಕ್ಕಕ್ಕೇನೂ ಕೊರತೆ ಇದ್ದಿರಲಿಲ್ಲ. ಸುತ್ತಲ ಸೀಮೆಯಲಿ ಸಾಬರ ಬಳಕೆಯಿಲ್ಲದ ಮನೆತನಸ್ಥರೂ ಇದ್ದಿರಲಿಲ್ಲ. ಸಾಬರು ಅದ್ಯಾವಾಗ ನಮಾಜು ಮಾಡುತ್ತಿದ್ದರೋ ಅದ್ಯಾವಾಗ ಕುರಾನು ಓದುತ್ತಿದ್ದರೋ ಅವರಿಗೂ ಗೊತ್ತಿರುವ ಹಾಗಿರಲಿಲ್ಲ. ಊರೊಪ್ಪತ್ತಿನಲ್ಲಿ ಅವಗಢ ಘಟಿಸಿದರೆ ಯಾರು ಎತ್ತ ಎಂಬ ಮುಲಾಜಿಲ್ಲದೆ ಸಾಬರು ಹಾಜರಾಗುತ್ತಿದ್ದರು. ಸಂಜೆ ತಾರಿಯ ಕಡೆ ಹೊರಟ ಗಾಂವಕರರಂಥ ಗಾಂವಕರರು, 'ಬನ್ನಿ ಸೈಬರೆ, ನಾಕು ಹೆಜ್ಜೆ ಹಾಕುವಾ. ದಣಪೆಗೆ ಅಂಡು ಊರಿ ಊರಿ ಅಂಡು ಕಾಯಿಸಿಕೊಳ್ಳೋದು ಸಾಕು ಮಾರಾಯರ,' ಅಂತ ನಗೆಯಲ್ಲೇ ಸಾಬರನ್ನು ಹೊರಡಿಸುತ್ತಿದ್ದರು. ಎಷ್ಟೋ ಸಲ ಸೈಬರು, ಗಾಂವಕರರು ಮನೆ ಹಾದಿ ಹಿಡಿದರೆ, ಮತ್ತೊಬ್ಬ ನಾಯ್ಕನೊಟ್ಟಿಗೆ ಮತ್ತೊಮ್ಮೆ ತಾರಿ ಬಾಗಿಲಿಗೆ ಸರ್ಕೀಟು ಹಾಕಿ ಬಂದರೇ. ಅವರ ಕಾಲು ಸೋಲಲಿಲ್ಲ. ಹೆಜ್ಜೆ ದಣಿಯಲಿಲ್ಲ. ಊರೊಟ್ಟಿನಲ್ಲಿ ಯಾವ ಮನೆಯಲ್ಲಿ ಘಟ ಉರುಳಿದರೂ 'ಯಾ ಅಲ್ಲಾ' ಎಂದು ಮುಂಡು ಕೊಡವಿ ಸುತ್ತಿಕೊಂಡು ಕೈಯಲ್ಲಿ ಐದು ಗರ್ನಾಲು ಹಿಡಿದು ಹೊರಟರೇ. ಹೆಗಲ ಮೇಲಿನ ಟವೆಲ್ಲಿನಿಂದ ಕಣ್ಣೊರೆಸಿಕೊಂಡು, ಹೆಣ ಎತ್ತುವಾಗ ಗರ್ನಾಲು ಹೊಡೆದು ಮಂದಿ ಜೊತೆ ನಾಕು ಹೆಜ್ಜೆ ಹಾಕಿದರೇ. ಅದು ನಮ್ಮೂರಲ್ಲಿ ಎಷ್ಟು ಬೆರೆತು ಅರಗಿತೆಂದರೆ, ಗರ್ನಾಲು ಸಾಬರು ಬಂದು ಗರ್ನಾಲು ಕುಟ್ಟುವವರೆಗೂ ಹೆಣ ಎತ್ತಲಿಕ್ಕೆ ಬರದು ಎಂಬಂತಾಗಿತ್ತು. ಸಾವಿನ ಮನೆಯಲ್ಲಿ ಯಾರಾದರೊಬ್ಬರು ಒದ್ದೆ ಕಣ್ಣಿನ ಕೂತ ದನಿಯಲ್ಲೇ ಹೊಯ್, ಸೈಬ್ರಿಗೆ ಹೇಳ್ ಕಳ್ಸರಾ ಹ್ಯಾಂಗೆ?' ಅಂತ ಕೇಳುವುದನ್ನು ಮರೀತಿರಲಿಲ್ಲ.

ಇಂಥ ದಿನಮಾನದಲ್ಲೇ ಆ ದೂರದಲ್ಲೆಲ್ಲೋ ಗದ್ದಲ ಎದ್ದು ಮಂದಿರದ ಇಟ್ಟಂಗಿ ಹೊರುವ ಜನರನ್ನ ಸನ್ನದ್ಧಗೊಳಿಸಲು ಹೊರಟ ರಥ ನಮ್ಮೂರಿನವರೆಗೂ ಬಂತು. ಬಂತು ಅಂದರೆ ಬಂದಿದ್ದಲ್ಲ. ಎಳೆದದ್ದೇ. ನಮ್ಮೂರು ಊರಿಂದೂರಿಗೆ ಹೋಗುವ ಹಾದಿಯಲ್ಲಿಲ್ಲ. ಕಡಲ ಹಿನ್ನೀರು ಹೊಕ್ಕಿದಂತೆ ಒಳಗೆ ಹರಡಿದೆ. ರಥ ಊರು ಹೊಕ್ಕದಿರಲೋ ರಾಮ ಅಂತ ಮೊರೆಯಿಟ್ಟದ್ದು ತಾಕಲಿಲ್ಲವೇನೋ. ಬಂದ ರಥದಲ್ಲಿ ಅದೇನಿತ್ತೋ? ಊರ ಹುಡುಗರು ಕೆಂಪು ಕುಂಕುಮ ತೀಡಿಕೊಂಡು ಕಣ್ಣಲ್ಲಿ ಕೆಂಡ ಕೆದರಿಸಿಕೊಂಡು ಓಡಾಡಿದರು. ಊರಿಡೀ ಉಪದ್ವ್ಯಾಪಿ ಜಗಳಗಳೆದ್ದು ರಾಮಾರಗತ ಹರಿದಾಡಿತು. ಇಂಥದೇ ಕಿರಿಕಿರಿಯ ದಿನಗಳಲಿ ಗರ್ನಾಲು ಸಾಬರ ಮದ್ದು ತಯಾರಿಸುವ ಚಪ್ಪರದಲ್ಲಿ ಢಮಾರ್ ಅಂತೇನೋ ಕಿವಿ ಒಡೆಯುವ ಸದ್ದಾಯಿತು. ತುಂಬಿ ಹರಿವ ನಮ್ಮೂರ ಹೊಳೆಯೊಳಗೆಲ್ಲ ಸಳಮಳ ಕುದಿಯೊಡೆಯಿತು. ಮದ್ದು ತಯಾರಿಸೋ ಚಪ್ಪರಕ್ಕೆ ಬೆಂಕಿ ಬಿದ್ದರೆ ಬೀಳಲಿ, ಮನೆಯ ಮಾಡೂ ಅರ್ಧ ಕರಕಾಯಿತಲ್ಲ, ಯಾ ಖುದಾ ಅಂತ ನಾಲಿಗೆ ನೀರು ಒಣಗಿಸಿ ಚಪ್ಪೆ ಮುಖ ಹೊತ್ತು ನಿಂತಿದ್ದ ಸೈಬರಿಗೆ ಮೆಟ್ಟಬೀಳುವಂತಾಗಿದ್ದು ಪೊಲೀಸ್ ಜೀಪು ಬಂದು ದಣಪೆ ಮುಂದೆ ಬ್ರೆಕ್ಕು ಒತ್ತಿದಾಗ. ತನ್ನ ಮೇಲೆ ತನ್ನೂರಿನವರೇ 'ಬಾಂಬ್ ತಯಾರಿಸ್ತಿದ್ದ' ಅಂತ ಕಂಪ್ಲೇಟು ಜಡಿದದ್ದು ಕೇಳಿ ಸೈಬರಿಗೆ ಕಣ್ ಕಣ್ ಬಿಡುವಂತಾಗಿತ್ತು. ಪೊಲೀಸ್ ಸ್ಟೇಷನ್ನಿನ ಹೆಸರನ್ನು ನಾಲಿಗೆಯಲಿ ಹೊಳ್ಳಾಡಿಸುವುದೂ ಅಪರಾಧ ಎಂದು ಬದುಕಿದ್ದ ಸಾಬರು ಒಂದು ಹಗಲುರಾತ್ರಿ ಪೂರಾ ಸ್ಟೇಷನ್ನಿನಲ್ಲಿದ್ದು ಮಾರನೇ ದಿನ ಮಧ್ಯಾಹ್ನ ಕಾಲೆಳೆಯುತ್ತ ಮನೆ ಮುಟ್ಟಿದ್ದರು. 40–50 ವರ್ಷಗಳಿಂದ ನಡೆಸುತ್ತ ಬಂದ ಕಸುಬು. ಗಾಜಿನ ಭರಣಿಯಲಿ ತುಂಬಿದ್ದ ಮದ್ದು ಈಗ ಸಿಡಿದದ್ದಾದರೂ ಹೇಗೆ? ಅಂತ ಅಜಬ್ ಅನ್ನಿಸಿ, ಕಂಗಾಲಾದರು. ಅವತ್ತಿಡೀ ದಣಪೆಗೆ ಅಂಡೂರಿ